ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಘಟಪ್ರಭಾ ವಿಭಾಗ, ಗೋಕಾಕ.
ಬಸ್ ನಿಲ್ದಾಣದ ಎದುರಿಗೆ, ಗೋಕಾಕ-591307

Phone (Off.) 08332 225079 Email : dcfgtb@aranya.gov.in

ಸಂಖ್ಯೆ:ಬಿ2/ಭೂಮಿ/ಗ್ರೀನಕೋ/ಎಫ್‌ಸಿ/2020-21 ದಿನಾಂಕ.17-05-2021.

ಇವರಿಗೆ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು
ಬೆಳಗಾವಿ ವೃತ್ತ, ಬೆಳಗಾವಿ.

ಮಾನ್ಯರೇ,

**ವಿಷಯ :** Diversion of 160.4 ha of forest land for construction of 1260 MW Standlone Pumped Storage project being development by M/s Greenko Solar energy private ltd. Proposal No.FP/KA/HYD/37723/2018 Reg.

**ಉಲ್ಲೇಖ :** 1) ತಮ್ಮ ಪತ್ರ ಸಂ. ಎ7/ಎಲ್‌ಎಎನ್‌ಡಿ/ಗ್ರೀನಕೋ/ಸಿಆರ್-/2020-21 ದಿ.11-5-2021.

2) ವಲಯ ಅರಣ್ಯ ಅಧಿಕಾರಿ ಸವದತ್ತಿ ಇವರ ಪತ್ರಸಂಖ್ಯೆ: ವಅಅ/ಸವ/ಭೂಮಿ/2020-21 ದಿನಾಂಕ:17-5-2021.

3) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ರಾಮದುರ್ಗ ಇವರ ಪತ್ರ ದಿ.17-5-21.

*****

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರ ತಮ್ಮ ಪತ್ರದಲ್ಲಿ ತಿಳಿಸಿದಂತೆ ಗ್ರೀನ್ ಕೋ ಸೋಲಾರ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಇವರು ಸವದತ್ತಿ ತಾಲೂಕಿನ ಕಾರ್ಲಕಟ್ಟಿ ಚಕ್ರಗೇರಿ ಹಾಗೂ ಕಾಗಿಹಾಳ ಗ್ರಾಮದಲ್ಲಿ ಒಟ್ಟು 160.40 ಹೆ. ಅರಣ್ಯ ಪ್ರದೇಶವನ್ನು 1260 ಮೆ.ವ್ಯಾ ನಿರ್ಮಾಣಕ್ಕಾಗಿ ಅರಣ್ಯ ಭೂಮಿಯನ್ನು ಹಂಚಿಕೆ ಮಾಡುವ ಕುರಿತು ದಿನಾಂಕ: 03-05-2021 ರಂದು ತಾವು ಮಾಡಿರುವ ಸ್ಥಾನಿಕ ಪರಿಶೀಲನೆಯಲ್ಲಿ ಕೆಲವೊಂದು ವಿವರಣೆ ಸಲ್ಲಿಸಲು ತಿಳಿಸಿದಂತೆ ಉಲ್ಲೇಖ (2) ಮತ್ತು (3) ರಂತೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ರಾಮದುರ್ಗ ಹಾಗೂ ವಲಯ ಅರಣ್ಯ ಅಧಿಕಾರಿ ಸವದತ್ತಿ ಇವರು ಸ್ಥಾನಿಕ ಪರಿಶೀಲನೆ ಮಾಡಿ ಈ ಕಛೇರಿಗೆ ವರದಿ ಸಲ್ಲಿಸಿರುತ್ತಾರೆ. ವಿವರ ಈ ಕೆಳಗಿನಂತಿವೆ.

| | |
|---|---|
| 1) ಕಾರ್ಲಕಟ್ಟಿ ಗ್ರಾಮದ ಅ.ಸ.ನಂ. 146 ರಲ್ಲಿ ಪುನರ್ ವಸತಿ ಸೌಲಭ್ಯಕ್ಕಾಗಿ ಹಂಚಿಕೆ ಮಾಡಲಾದ ಅರಣ್ಯ ಪ್ರದೇಶದಲ್ಲಿ ಕೋಳಿ ಫಾರ್ಮ್ ಮತ್ತು ಪೆಟ್ರೋಲ್ ಬಂಕ್ ಅಳವಡಿಸಿರುವುದು ಕಂಡುಬಂದಿದ್ದು, ಸದರಿ ಪ್ರದೇಶ ಉಪಯೋಗಿ ಸಂಸ್ಥೆಯವರು ಯೋಜನಾ ವ್ಯಾಪ್ತಿಯಲ್ಲಿ ಬರುತ್ತದೆಯೋ ಅಥವಾ ಇಲ್ಲ ಎಂಬ ಬಗ್ಗೆ ವರದಿ ಸಲ್ಲಿಸುವುದು. | ಕಾರ್ಲಕಟ್ಟಿ ಗ್ರಾಮದ ಅ.ಸ.ನಂ. 146 ರಲ್ಲಿ ಪುನರ್ ವಸತಿ ಸೌಲಭ್ಯಕ್ಕಾಗಿ ಹಂಚಿಕೆ ಮಾಡಲಾದ ಅರಣ್ಯ ಪ್ರದೇಶದಲ್ಲಿ ಕೋಳಿ ಫಾರ್ಮ ಮತ್ತು ಪೆಟ್ರೋಲ್ ಬಂಕ್ ಅಳವಡಿಸಿದ್ದು ನಿಜವಿದ್ದು ಉಪಯೋಗಿ ಸಂಸ್ಥೆಯವರು ಉದ್ದೇಶಿಸಿರುವ ಯೋಜನಾ ಪ್ರದೇಶವು ಅ.ಸ.ನಂ. 146 ರಲ್ಲಿ ಕಂಡು ಬರುವ ಕೋಳಿ ಫಾರ್ಮ (ತಾತ್ಕಾಲಿಕವಾಗಿ ನಿರ್ಮಿಸಿದ) ಮಾತ್ರ ಒಳಗೊಂಡಿರುತ್ತದೆ ಹಾಗೂ ಪೆಟ್ರೋಲ್ ಬಂಕ್ ಹೊಂದಿರುವ ಸ್ಥಳ ಒಳಗೊಂಡಿರುವುದಿಲ್ಲ. |
| 2) ಉಪಯೋಗಿ ಸಂಸ್ಥೆಯವರು ಪ್ರಸ್ತಾಪಿಸಿರುವ ಪ್ರದೇಶದಿಂದ ಸೊಗಲ ಸೋಮೇಶ್ವರ ದೇವಸ್ಥಾನ ಮತ್ತು ಸೊಗಲ ಜಲಪಾತ ಇರುವ ವಾಯುದೂರ ಎಷ್ಟು | ಉಪಯೋಗಿ ಸಂಸ್ಥೆಯವರು ಉದ್ದೇಶಿಸಿರುವ ಯೋಜನಾ ಪ್ರದೇಶವು ಸೊಗಲ ಸೊಮೇಶ್ವರ ದೇವಸ್ಥಾನ ಹಾಗೂ ಜಲಪಾತದಿಂದ (N-15 51 38 E-74 58 25) ಮೂರು ಕಿಲೋಮೀಟರ್ ವಾಯು ದೂರದಲ್ಲಿದೆ. [ಯೋಜನಾ |

<table>
<tr><td>ಎಂಬುದನ್ನು ವರದಿ ಸಲ್ಲಿಸುವುದು.</td><td>ಪ್ರದೇಶದ GPS N-15 51 26 E-75 00 18]</td></tr>
<tr><td>3) ಉಪಯೋಗಿ ಸಂಸ್ಥೆಯವರು ಪ್ರಸ್ತಾಪಿಸಿರುವ ಪ್ರದೇಶವು ಈ ಹಿಂದೆ ಬೇರೆ ಯೋಜನೆಗಳಿಗೆ ಹಂಚಿಕೆ ಮಾಡದೇ ಇರುವ ಬಗ್ಗೆ ವರದಿ ಸಲ್ಲಿಸುವುದು.</td><td>ಉಪಯೋಗಿ ಸಂಸ್ಥೆಯವರು ಉದ್ದೇಶಿಸಿರುವ ಯೋಜನಾ ಪ್ರದೇಶವು ಬೇರೆ ಯಾವುದೇ ಯೋಜನೆಗಳಿಗೆ ಹಂಚಿಕೆಯಾಗಿರುವುದಿಲ್ಲ ಎಂಬುದು ವಲಯ ಕಛೇರಿಯ ದಾಖಲಾತಿಗಳನ್ನು ಪರಿಶೀಲಿಸಲಾಗಿ ಕಂಡುಬಂದಿರುತ್ತದೆ.</td></tr>
<tr><td>4) ವಿಶೇಷ ಭೂಸ್ವಾಧೀನ ಅಧಿಕಾರಿಗಳು ಸೌದತ್ತಿ ಇವರ ಆದೇಶಗಳು ದಿನಾಂಕ:08-03-1975 ಮತ್ತು 19-09-1975 ರಲ್ಲಿ ಪಹಣಿ ಪತ್ರಿಕೆಗಳಲ್ಲಿ ಪ್ರಸ್ತಾಪಿತ ಅರಣ್ಯ ಪ್ರದೇಶದಲ್ಲಿ ನಮೂದಿಸಿದ ಖಾಸಗಿ ಜನರ ಹೆಸರುಗಳು ಮತ್ತು ಉಪಯೋಗಿಸುತ್ತಿರುವ ಅರಣ್ಯ ಕ್ಷೇತ್ರದ ವಿವರಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಂಡು ವರದಿ ಸಲ್ಲಿಸುವುದು.</td><td>ವಿಶೇಷ ಭೂಸ್ವಾಧೀನ ಅಧಿಕಾರಿಗಳು ಸವದತ್ತಿ ರವರ ಆದೇಶ ದಿನಾಂಕ 08-03-1975 ಮತ್ತು 19-09-1975 ರಲ್ಲಿ ಪಹಣಿ ಪತ್ರಿಕೆಗಳಲ್ಲಿ ಪ್ರಸ್ತಾಪಿತ ಅರಣ್ಯ ಪ್ರದೇಶವು ಈ ಕೆಳಗೆ ನಮೂದಿಸಿದ ಖಾಸಗಿ ಜನರು ಮತ್ತು ಉಪಯೋಗಿಸುತ್ತಿರುವ ಕ್ಷೇತ್ರ ಕೆಳಗಿನಂತಿವೆ.
<table>
<tr><th>ಅ. ನಂ.</th><th>ಹೆಸರು</th><th>ಕ್ಷೇತ್ರ</th></tr>
<tr><td>1</td><td>ಪರುವತಗೌಡ ಬಸನಗೌಡ ಪಾಟೀಲ</td><td>2.25</td></tr>
<tr><td>2</td><td>ಮಲಪೂರಪ್ಪ ಅಡಿವೆಪ್ಪ ಬಡಿಗೇರ</td><td>2.00</td></tr>
<tr><td>3</td><td>ನಾಗಪ್ಪ ಮಾಯಪ್ಪ ನಡುವಿನಹಳ್ಳಿ</td><td>2.00</td></tr>
<tr><td>4</td><td>ವಿಠ್ಠಲ ಶಿದ್ದಪ್ಪ ವಾಲಿಕಾರ</td><td>2.00</td></tr>
<tr><td>5</td><td>ಇಮಾಮಸಾಬ ಹುಸೇನಸಾಬ ಇಮ್ಮನ್ನವರ</td><td>2.00</td></tr>
<tr><td>6</td><td>ಮಕ್ತುಂಹುಸೇನ ಹಸನ ಮುಜಾವರ</td><td>1.24</td></tr>
<tr><td>7</td><td>ಹಸನಸಾಬ ಹುಸೇನಸಾಬ ಮುಜಾವರ</td><td>2.00</td></tr>
<tr><td>8</td><td>ಮಕ್ತುಂಹುಸೇನ ಹಸನ ಮುಜಾವರ</td><td>1.26</td></tr>
</table></td></tr>
</table>

ಉಲ್ಲೇಖ(1)ರ ಪತ್ರದ ಪ್ರಕಾರ ತಾವು ಕೇಳಿರುವ 4 ಅಂಶಗಳಿಗೆ ಮಾಹಿತಿಯ ವಿವರಣೆಯನ್ನು ತಮಗೆ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ. ಸದರಿ ಪ್ರಸ್ತಾವಣೆಯನ್ನು OSMFC ಅವಲೋಕ ಮಾಡಲಾಗಿದೆ.

ತಮ್ಮ ವಿಶ್ವಾಸಿ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಘಟಪ್ರಭಾ ವಿಭಾಗ, ಗೋಕಾಕ.